ಮಾಡಿರುವವರನ್ನು ಹಾಕಲಾಗುತ್ತದೆ. ಇನ್ನೂ ಔಷಧವನ್ನು ನಗರ ಮತ್ತು ಪಟ್ಟಣ ಎಂಬ ಭೇದವಿಲ್ಲದೆ ಅಲ್ಲಿನ ಅವಶ್ಯಕತೆ ಎಷ್ಟಿದೆಯೋ ಅಷ್ಟನ್ನೂ ಒದಗಿಸಲಾಗುವುದು.

Starting of Silk Rearing centre at Mudhol

1948. SRI B. G. JAMAKHANDI(Mudhol):—Will the Minister for Sericulture, Animal Husbandry and Fisheries be pleased to state:

a) When the Silk Rearing and Silk Reeling Centre was sanctioned in Mudhol ?

b) Has the work started in that centre?

c) If so, reasons for the same ?

SRI K. M. KRISHNA REDDY (Minister of Sericulture, Animal Husbandry and Fisheries).—

a) Silk worm Rearing Centre (Chawki Rearing) was started at Mudhol during 1978-79 under C.A.D.A. Programme and is functioning since then. During 1985-86 establishment of a silk Reeling Complex was taken up under K.S.P. (MTA).

b) The work in the Silk worm Rearing Centre has been started and is functioning from 1978-79. The work in the Reeling Complex has not started.

c) Does not arise in respect of Silk worm Rearing Centre. In respect of Silk Reeling Complex, the construction work of sheds, electrification work and sanction of loans by Banks is yet to be finalised.

ಶ್ರೀ ಬಿ ಜಿ ಜಮಖಂಡಿ.—ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯು ಮುಂಧೋಳ ತಾಲ್ಲೂಕು ರೇಷ್ಮೆ ಬೆಳೆಯುವ ಪ್ರದೇಶ. ಬಿಜಾಪುರ ಜಿಲ್ಲೆಯ ಅವರೇಜ್ ತೆಗೆದುಕೊಂಡರೂ ಮುಂಧೋಳದಲ್ಲೇ ಹೆಚ್ಚು ಎಕರೆಗಳಲ್ಲಿ ರೇಷ್ಮೆ ಬೆಳೆಯಲಾಗುತ್ತದೆ. ಕಾಡಾ ಮತ್ತು ಕೆಎಸ್ಎಫ್ಸಿ ಪ್ರೋಗ್ರಾಮ್ಸ್ ಅಡಿಯಲ್ಲಿ ೧೯೮೬-೮೭ರಲ್ಲಿ ಕೆಲವು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಅಲ್ಲದೆ ರೇಷ್ಮೆಯನ್ನು ಬಿಜಾಪುರದಲಷ್ಟೇ ಅಲ್ಲದೆ ಪಕ್ಕದ ಬೆಳಗಾಂನ ಕೆಲವು ತಾಲ್ಲೂಕುಗಳಲ್ಲೂ ಬೆಳೆಯಲಾಗುತ್ತದೆ. ಇಲ್ಲಿ ಪ್ರಶ್ನೆ ಏನೆಂದರೆ, ಅಲ್ಲಿ ಒಳ್ಳೆಯ ಹವಾಮಾನ ಮತ್ತು ನೆಲವಂಟ್ಟ ಚೆನ್ನಾಗಿದ್ದರೂ ಮಾರಾಟ ವ್ಯವಸ್ಥೆ ಮತ್ತು ಸಿಲ್ಕ್ ರೀಲಿಂಗ್ ಸೆಂಟರ್‌ಗಳ ವ್ಯವಸ್ಥೆ ಅಲ್ಲಿ ಇಲ್ಲ. ಅದಕ್ಕಾಗಿ ಎಷ್ಟೋ ಸಲ ದೂರದ ಬೆಂಗಳೂರು ಜಿಲ್ಲೆಯ ರಾಮನಗರಕ್ಕೆ ಬಗಬೇಕಾಗುತ್ತದೆ. ಸರ್ಕಾರ ಇದರ ಬಗೆ ಉತ್ಸಾಹ ತೋರಿಸಿಲ್ಲ. ಈಗಾಗಲೇ ಕೋಲಾರದ ಶಿಡ್ಲಘಟ್ಟದ ಕೇಂದ್ರದಲ್ಲಿ ೯ ಹುಡುಗಿಯರು ೪೯ ಜನ ಯುವಕರು ಸಿಲ್ಕ್ ರೀಲಿಂಗ್ ಬಗ್ಗೆ ಟ್ರೈನಿಂಗ್ ತೆಗೆದುಕೊಂಡು ಬಂದಿದ್ದಾರೆ. ಆದರೆ ಅವರ ಸೇವೆಯನ್ನು ಸರ್ಕಾರ ಸದುಪಯೋಗಪಡಿಸಿಕೊಳ್ಳುತ್ತಿಲ್ಲ. ಆದ್ದರಿಂದ ಈ ಸೌಲಭ್ಯವನ್ನೆಲ್ಲ ಮುಂಧೋಳದಲ್ಲಿ ಸರ್ಕಾರ ಬೇಗ ಸಿಗುವಂತೆ ಮಾಡಬೇಕು, ರೀಲಿಂಗ್ ಸೆಂಟರ್ ಬೇಗ ಪ್ರಾರಂಭವಾಗಬೇಕೂ.

ಶ್ರೀ ಕೆ ಎಂ ಕೃಷ್ಣಾರೆಡ್ಡಿ.—ಹೌದು, ಅಲ್ಲಿನ ಸಮಸ್ಯೆ ಸಿಬ್ಬಂದಿ ಅಥವಾ ಕೆಲಸಗಾರರದಲ್ಲ. ಈಗಾಗಲೇ ನೀವು ಹೇಳಿದಂತೆ ಟ್ರೈನಿಂಗ್ ಪಡೆದವರು ಅಲ್ಲಿದ್ದಾರೆ. ನಾವು ೧೦ ಇಂಡಿವಿಜುವಲ್ ಕಾಂಪ್ಲೆಕ್ಸ್ ಕಟ್ಟಿಸಿಕೊಂಡಿದ್ದೇವೆ. ವಿಮ್ಮಚ್ಚಕ್ಕಿ ಸರಬರಾಜು ಆದ ತಕ್ಷಣ ನಾಲ್ಕು ಜಿಚ್ಚುವ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಈಗ ಸದಸ್ಯರಾದ ಶ್ರೀ ಎಸ್.ಎನ್. ಬೇಡ್ ಅವರು ಅಬ್ಸೆಂಟ್.

ಸುಬ್ರಹ್ಮಣ್ಯದಲ್ಲಿರುವ ಕುಮಾರ ಪರ್ವತ ಕಾಡಿನ ರಕ್ಷಣೆ

೧೬೫೯. ಶ್ರೀ ಬಿ.ಎಂ. ಇದಿನಬ್ಬ,(ಉಳ್ಳಾಲ).—ಮಾನ್ಯ ಅರಣ್ಯ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡದ ಸುಬ್ರಹ್ಮಣ್ಯದ ಕುಮಾರ ಪರ್ವತದ ಕಾಡನ್ನು ಸಂರಕ್ಷಿತ ಅರಣ್ಯವೆಂದು ಘೋಷಿಸಿ ಮರಗಳ ಕಡಿತವನ್ನು ಸಂಪೂರ್ಣ ನಿಲ್ಲಿಸಲಾಗುವುದೇ?

ಆ) ಈ ಅರಣ್ಯವನ್ನು ಯಾವುದಾದರೂ ಕಂಪನಿಗೆ ಕೊಡಲಾಗಿದೆಯೇ?

ಇ) ಅರಣ್ಯ ಸಂಪತ್ತಿನ ನೆಲೆಯಾದ ಸುಬ್ರಹ್ಮಣ್ಯ ನೇತ್ರಾವತಿ ನದಿಯನ್ನು ಬರಡಾಗಿಸಲು ಸಂಚು ನಡೆಯುತ್ತಿರುವುದನ್ನು ತಡೆಗಟ್ಟಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀ ಜೆ.ಎಸ್. ದೇಶಮುಖ್ (ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಸುಬ್ರಹ್ಮಣ್ಯ ಅರಣ್ಯ ಪ್ರದೇಶವನ್ನು ೧೯೦೫ನೇ ಇಸವಿಯಲ್ಲಿ ಕಾದಿಟ್ಟ ಅರಣ್ಯವೆಂದು ಘೋಷಿಸಲಾಗಿದೆ. ಆದರಂತೆ ಅರಣ್ಯ ಪ್ರದೇಶಕ್ಕೆ ಯಾವುದೇ ಹಾನಿ ಆಗದಂತೆ. ೪೦ ವರ್ಷಗಳಿಗೊಮ್ಮೆ 'ಆಯ್ದು ಕಡಿಯುವ ನಿಯಮಕ್ಕೆ' (on selection felling basis)ಗೆ ಅನುಸಾರವಾಗಿ ಕಾಮಗಾರಿಯನ್ನು ನಡೆಸಲಾಗುತ್ತಿದೆ.

ಆ) ಹೌದು ಈ ಪ್ರದೇಶವು ಕೆಲವು ದಶಕಗಳ ಹಿಂದೆಯೇ ಮೆ: ಮಫತ್‌ಲಾಲ್ ಪ್ಲೈವುಡ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು ಇವರಿಗೆ ನೀಡಿದ ಗುತ್ತಿಗೆ ಪ್ರದೇಶಗಳಲ್ಲಿ ಸೇರಿದೆ.

ಇ) ಈ ಅರಣ್ಯ ಪ್ರದೇಶವು ಉತ್ತಮ ಸ್ಥಿತಿಯಲ್ಲಿದ್ದು, ಅದಕ್ಕೆ ಧಕ್ಕೆಯಾಗದಂತೆ ಜಾಗರೂಕತೆ ವಹಿಸಿ ನೋಡಿಕೊಳ್ಳಲಾಗುವುದು.

ಶ್ರೀ ಬಿ. ಎಂ ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ಒಂದನೇ ಪ್ರಶ್ನೆಗೆ ಸುಬ್ರಹ್ಮಣ್ಯ ಅರಣ್ಯ ಪ್ರದೇಶವನ್ನು ೧೯೦೫ನೇ ಇಸವಿಯಲ್ಲಿ ಕಾದಿಟ್ಟ ಅರಣ್ಯವೆಂದು ಘೋಷಿಸಲಾಗಿದೆ ಎಂದು ಒಂದು ಕಡೆ ಹೇಳಿ, ಇನ್ನೊಂದು ಕಡೆ ಈ ಪ್ರದೇಶವನ್ನು ಮಫತ್‌ಲಾಲ್ ಪ್ಲೈವುಡ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆಗೆ ನೀಡಲಾಗಿದೆ ಎಂದು ಹೇಳಿದ್ದೀರಿ. ಆದ್ದರಿಂದ ಈ ಕಂಪನಿಯವರು ಗುತ್ತಿಗೆ ಪಡೆದ ಮೇಲೆ ಸಮೃದ್ಧವಾದ ಕಾಡನ್ನು ನಾಶ ಮಾಡಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಾ ನೈಸರ್ಗಿಕ ಸಂಪತ್ತನ್ನು ಸೂರೆ ಮಾಡುತ್ತಿರುವುದು ನಿಮಗೆ ಗೊತ್ತಿಲ್ಲವೆ?

ಶ್ರೀ ಜೆ. ಎಸ್ ದೇಶಮುಖ್.—ಈಗಾಗಲೇ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಖಾಸಗಿಯವರಿಗೆ ಈ ರೀತಿ ಗುತ್ತಿಗೆ ಕೊಡುತ್ತಿದ್ದ ಪದ್ಧತಿಯನ್ನು ಇನ್ನು ಮುಂದೆ ಕೈಬಿಟ್ಟು ಸರ್ಕಾರದವರೇ ಗಿಡಗಳನ್ನು ಕಡಿದು ಡಿಪೋಗಳಿಗೆ ತಂದು ಪೂರೈಸುವ ಆದೇಶ ನೀಡಲಾಗಿದೆ. ಖಾಸಗಿಯವರು ಇನ್ನು ಮುಂದೆ ಕಾಯ್ದಿಟ್ಟ ಅರಣ್ಯ ಪ್ರದೇಶಗಳಿಗೆ ಪ್ರವೇಶ ಮಾಡಲು ಅವಕಾಶ ಕೊಡುವುದಿಲ್ಲ. ಈಗಿರುವ ಮಫತ್‌ಲಾಲ್ ಕಂಪನಿಯ ಲೀಸನ್ನು ಎಕ್ಸ್‌ಟೆನ್‌ಷನ್ ಮಾಡಬೇಕೋ ಅಥವಾ ಬೇಡವೊ. ಎಂಬುದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿದೆ.

ಶ್ರೀ ಬಿ.ಎಂ ಇದಿನಬ್ಬ.—ನೀವು ಕ್ರಮ ತೆಗೆದುಕೊಳ್ಳಿ. ಆದರೆ ಆ ಸಂದರ್ಭದಲ್ಲಿ ಸಮೃದ್ಧ ಸಮೃದ್ಧವಾದ ಅರಣ್ಯವನ್ನು ಈ ಕಂಪನಿಯವರು ನಾಶ ಮಾಡುತ್ತಿರುವುದರ ವಿರುದ್ಧ ಉಗ್ರ ಕ್ರಮ ಮೊದಲು ತೆಗೆದುಕೊಳ್ಳಬೇಕು, ಕಾಡನ್ನು ಉಳಿಸಬೇಕು ಇಷ್ಟು ಗಿಡಗಳನ್ನು ಕೆಡವಿದರೆ ಇಷ್ಟು ಗಿಡಗಳನ್ನು ಕೆಡವುವುವರೇ ನೆಡಬೇಕೆಂಬ ನಿಮ್ಮ ಇಲಾಖಾ ನಿಯಮವೆಲ್ಲ ಗಾಳಿಪಾಲಾಗಿದೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಹೌದು, ಕಾಡನ್ನು ಉಳಿಸಬೇಕು.

ಅಧ್ಯಕ್ಷರು.—ಈಗ ಶ್ರೀ ಕಡಪಟ್ಟಿಯವರ ಪ್ರಶ್ನೆ. ಅದನ್ನು ಪಿಡಬ್ಲ್ಯೂಡಿಗೆ ವರ್ಗಾಯಿಸಲಾಗಿದೆ

ಶ್ರೀ ಎಸ್.ಎಸ್ ಕಡಪಟ್ಟಿ.—ಮೊದಲು ನಾನು ಪಿಡಬ್ಲ್ಯೂಡಿಗೆ ಕೇಳಿದ್ದೆ. ಆಗ ಅದನ್ನು ಫಾರೆಸ್ಟ್‌ಗೆ ವರ್ಗಾಯಿಸಲಾಗಿತ್ತು. ಈಗ ಮತ್ತೆ ಪಿಡಬ್ಲ್ಯೂಡಿಗೆ ಕಳಿಸಲಾಗಿದೆ.